ಅಂಥವರನ್ನು ಹೊರಗೆ ಕಳುಹಿಸಬೇಕಾಗಿತ್ತು. ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕುವುದಕ್ಕೆ ನಾನು ಆ ಖಾತೆಯ ಮಂತ್ರಿಯಾಗಿದ್ದಾಗ ರೆಕಾರ್ಡ್ಸನ್ನು ಡೆವಲಪ್ ಮಾಡಿದ್ದೆ. ಅವರು ಯಾವ ಮಟ್ಟಿನ ಅಧಿಕಾರಿಗಳೆಂದರೆ, ರಾಯಚೂರಿನಲ್ಲಿ ಬಸ್‌ಗಳ ರಾಷ್ಟ್ರೀಕರಣ ಆಗತಕ್ಕಂಥ ಸಂದರ್ಭದಲ್ಲಿ ಖಾಸಗಿ ಬಸ್ ಮಾಲೀಕರಿಂದ ಈ ಅಧಿಕಾರಿ ದುಡ್ಡು ತೆಗೆದುಕೊಂಡಿದ್ದರು.

SRI K.J. GEORGE.— The enquiry is pending. When that is the case if we go to the merit of the case, it may prejudice the mind of the Enquiry Officer.

SRI P.G.R. SINDHIA.— Why do you make him the Head of the Department?

SRI K.J. GEORGE.— The moral of the officers will go if we go to the merit of the case ಎನ್‌ಕ್ವೈರಿ ರಿಪೋರ್ಟ್ ಬಂದ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೇವೆ. ಇನ್ನೂ ಒಂದು ವಿಷಯವನ್ನು ಮಾನ್ಯ ಸಿಂಧ್ಯಾರವರಿಗೆ ಹೇಳುತ್ತೇನೆ. ನಿಮ್ಮ ಕಾಲದಲ್ಲಿ ನಿಮ್ಮ ಸರ್ಕಾರ ಇರುವಾಗ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಒಬ್ಬ ಅಧಿಕಾರಿ ಮೇಲೆ ಎನ ಕ್ವಯರಿ ಯಾಗಿ ಅವರ ವಿರುದ್ಧ ರಿಪೋರ್ಟ್ ಬಂದಿದ್ದರೂ ಕೂಡ ಕ್ರಮವನ್ನು ತೆಗೆದುಕೊಂಡಿರಲಿಲ್ಲ. ಆ ಆಫೀಸರ್ ವಿರುದ್ಧ ಎನ್‌ಕ್ವಯರಿ ಜಡ್ಜ್‌ಮೆಂಟ್ ಬಂದ ಮೇಲೆ ಸಹಿತ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ.— ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಬಗ್ಗೆ ನಾನು ಕೇಳುತ್ತಿಲ್ಲ. ನಾನು ಕೇಳುತ್ತಿರುವುದು ಬಹಳ ಮಹತ್ವವಾಗಿರತಕ್ಕಂಥ ಪ್ರಶ್ನೆ.

ಅಧ್ಯಕ್ಷರು.— ಡಿಮ್ಯಾಂಡ್ ಮೇಲೆ ಮಾತನಾಡುವಾಗ ಇದನ್ನು ಮಾತನಾಡಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ.— ಹಾಗಾದರೆ ಒಂದು ಮಾಡಿ, ಮಾನ್ಯ ಅಧ್ಯಕ್ಷರೇ, you suspend him till the enquiry is over. How minister cannot make him the Head of the Department. ಸೀರಿಯಸ್ ಚಾರ್ಜ್‌ಸ್ ಇರತಕ್ಕಂಥ ಆಫೀಸರ್‌ನ್ನು ಪೆಂಡಿಂಗ್ ಎನ್‌ಕ್ವಯರಿ ಎಂದು ಪ್ರಮೋಟ್ ಮಾಡಿ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಮಾಡಿದ್ದೇವೆ ಎನ್ನುವುದು ರಾಜ್ಯಕ್ಕೆ ಗೊತ್ತಾಗಲಿ.

ಶ್ರೀ ಆರ್. ವಿ. ದೇಶಪಾಂಡೆ.— ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿದ್ದ ಆಫೀಸರ್ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ.

SRI K.J. GEORGE.— Enquiry is not a bar. There is a rule. We have given temporary promotion. We will expedite the enquiry. We will take action on the decisions of the enquiry. In the case of Agro-Industries Corporation, even after the judgement of the enquiry, you have not taken action. When that is the case, how can you question us now?

ಕರ್ನಾಟಕದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ

೩೫೫ ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು).— ಪ್ರವಾಸ್ಯ ಯೋಜನಾ ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪ್ರವಾಸಿ ಸ್ಥಳಗಳ ಅಭಿವೃದ್ಧಿ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿಪಡಿಸಲು ವಿದೇಶಿ ಹಣದ ನೆರವು ದೊರಕುವ ಸಂಭವಗಳಿ ಇರುವುದೇ?

ಇ) ಹಾಗಿದ್ದ ಪಕ್ಷದಲ್ಲಿ ಯಾವುದಿಂದ ಸಹಾಯ ನಿರೀಕ್ಷಿಸಲಾಗಿದೆ?

ಈ) ಅಂತಹ ಅಭಿವೃದ್ಧಿಗೆ ಸರ್ಕಾರವು ಗುರುತಿಸಿರುವ ಪ್ರವಾಸಿ ಸ್ಥಳಗಳು ಯಾವುವು ಮತ್ತು ಕಾರ್ಯಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಇಲಾಖಾ ಸಚಿವರು).—

ಅ) ಕರ್ನಾಟಕದಲ್ಲಿ ಪ್ರವಾಸಿ ಸ್ಥಳಗಳ ಅಭಿವೃದ್ಧಿಗೆ ಈ ಕೆಳಕಂಡ ಯೋಜನೆಗಳನ್ನು ತೆಗೆದು ಕೊಳ್ಳಲಾಗಿದೆ.

೧ ಪ್ರವಾಸಿಗರಿಗೆ ವಸತಿ ಸೌಲಭ್ಯ
೨ ರಸ್ತೆಬದಿ ಶೌಲಭ್ಯ
೩ ಉಪಹಾರ ಮಂದಿರ ಮತ್ತು ಶೌಚಾಲಯಗಳ ಸೌಲಭ್ಯ
೪ ದೋಣಿ ವಿಹಾರ ಸೌಲಭ್ಯ
೫ ವ್ಯವಸ್ಥಿತ ಪ್ರವಾಸಗಳು
೬ ವಿಮಾನ ನಿರ್ಮಾಣ ಅಭಿವೃದ್ಧಿ

ಆ) ಹೌದು

ಇ) ಜಪಾನ್ ಸರ್ಕಾರದಿಂದ

ಈ) ಈ ಯೋಜನೆಯಲ್ಲಿ ಮೂರು ವಲಯಗಳಾಗಿ ಗುರುತಿಸಿವೆ.

೧ ಉತ್ತರ ವಲಯ
೨ ದಕ್ಷಿಣ ವಲಯ
೩ ಕರಾವಳಿ ವಲಯ

ಈ ಮೂರು ವಲಯಗಳಲ್ಲಿ ಯಾವ ಯಾವ ಕೇಂದ್ರಗಳನ್ನು ಅಭಿವೃದ್ಧಿಪಡಿಸಬೇಕೆಂಬುದನ್ನು ಅಂತಿಮವಾಗಿ ಇನ್ನೂ ನಿರ್ಧಾರವಾಗಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಜಪಾನ್ ಸರ್ಕಾರದ ಸಹಾಯ ಬರುತ್ತದೆಂದು ಹೇಳಿದ್ದಾರೆ. ಅಲ್ಲಿಂದ ಎಷ್ಟು ಬರುತ್ತದೆ?

೧೧. ೩೭ ಎ.ಎಂ.

ಶ್ರೀ ಬಿ. ಶಿವಣ್ಣ (ಪ್ರವಾಸೋದ್ಯಮ ಮತ್ತು ಕಾನೂನು ಸಚಿವರ ಪರವಾಗಿ).—೧೬೨ ಕೋಟಿ ರೂಪಾಯಿಯ ಪ್ರಾಜೆಕ್ಟ್ ಅನ್ನು ತಯಾರು ಮಾಡಿದ್ದೇವೆ. ಅದರಲ್ಲಿ ೧೦೦ ಕೋಟಿ ರೂಪಾಯಿಯನ್ನು ಸ್ಟೇಟ್ ಮತ್ತು ಜಪಾನ್‌ನವರು ಸಹಾಯ ಮಾಡುತ್ತಾರೆ. ಉಳಿದ ೬೨ ಕೋಟಿ ರೂಪಾಯಿಯನ್ನು ಪ್ರೈವೇಟ್ ಸೆಕ್ಟಾರ್ ಮತ್ತು ಬೇರೆ ಬ್ಯಾಂಕ್ಸ್ ಮೂಲಕ ಸಾಲ ಪಡೆದುಕೊಳ್ಳುತ್ತೇವೆ.

ಶ್ರೀ ಎಂ. ವಿ. ವೆಂಕಟಪ್ಪ.—ಈಗ ಮೂರು ವಲಯಗಳನ್ನು ವಿಂಗಡಿಸಬೇಕು ಎಂದು ಇದ್ದೇವೆ, ಅಂತಿಮವಾಗಿ ತೀರ್ಮಾನವಾಗಿಲ್ಲವೆಂದು ಹೇಳಂತ್ತೀರಿ, ಈ ಮೂರು ವಲಯಗಳಲ್ಲಿ ಪ್ರಿಲಿಮಿನರಿಯಾಗಿ ಯಾವುದಕ್ಕೆ ಮಾಡಿದ್ದೀರಿ ಎಂದು ಸ್ವಲ್ಪ ಹೇಳುತ್ತೀರಾ?

ಶ್ರೀ ಬಿ. ಶಿವಣ್ಣ.—ಬೆಂಗಳೂರು, ಮೈಸೂರು, ಹಳೆಬೀಡು, ಶ್ರವಣಬೆಳಗೊಳ, ಬೆಳಕೇರಿ, ಮಂತ್ರೋಡಿ, ಬಿಳಿಗಿರಿರಂಗನಬೆಟ್ಟ, ಬಾದಾಮಿ, ಹಂಪೆ, ಬಿಜಾಪುರ, ಬೀದರ್ ಮತ್ತು ಗುಲ್ಬರ್ಗ.

ಶ್ರೀ ಎಂ. ವಿ. ವೆಂಕಟಪ್ಪ.—ಮೂರು ವಲಯಗಳೆಂದು ಹೇಳುತ್ತೀರಿ, ದಕ್ಷಿಣ ವಲಯಕ್ಕೆ ಯಾವುದು ಸೇರಿದೆ, ಉತ ರ ವಲಯಕ್ಕೆ ಯಾವುದು ಸೇರಿದೆ ಎಂಬುದನ್ನು ತಿಳಿಸಿ.

ಅಧ್ಯಕ್ಷರು.—ಅವರು ಹೇಳುವುದರಲ್ಲಿ ಅರ್ಥ ಇದೆ. ನಾನು ಹೆಸರು ಹೇಳುತ್ತೇನೆ. ನೀವು ಡಿವೈಡ್ ಮಾಡಿಕೊಳ್ಳಿ ಎಂದು ಹೇಳುತ್ತಿದ್ದಾರೆ.

ಶ್ರೀ ಬಿ. ಶಿವಣ್ಣ.—ಸೌತ್, ನಾರ್ತ್, ಮತ್ತು ಕೋಸ್ಟಲ್‌ಗಳಲ್ಲಿ ಯಾವ್ಯಾವ ಜಾಗಗಳು ಬರುತ್ತವೆ ಎಂಬುದನ್ನು ಹೇಳುತ್ತೇನೆ ಬೆಂಗಳೂರು, ಮೈಸೂರು, ಹಳೇಬೀಡು, ಶ್ರವಣಬೆಳಗೊಳ, ಬೆಳಕೇರಿ, ಮಂತ್ರೋಡಿ, ಬಿಳಿಗಿರಿರಂಗನಬೆಟ್ಟ, ಇವು ಸೌತ್ ಆಯಿತು. ಬಾದಾಮಿ, ಹಂಪೆ, ಬಿಜಾಪುರ, ಬೀದರ್, ಗುಲ್ಬರ್ಗ, ಇವು ನಾರ್ತ್ ಆಯಿತು. ಕಾರವಾರ ಮುರುಡೇಶ್ವರ, ಮರವಂತೆ, ಮಲ್ಪೆ, ಶರಾವತಿ, ಕುದುರೆಮುಖ, ದಾಂಡೇಲಿ ಸೋಮೇಶ್ವರ, ಬಂಡೀಪುರ, ಭದ್ರ, ರಂಗನತಿಟ್ಟು, ರಾಣೆಬೆನ್ನೂರು, ಬನ್ನೇರುಘಟ್ಟ, ಬಳ್ಳಾರಿ, ಹಾಸನ, ಶ್ರೀರಂಗಪಟ್ಟಣ, ಬೇಲೂರು, ಐಹೊಳೆ, ಪಟ್ಟದಕಲ್, ಮತ್ತು ಶಿರಾಡಿಘಾಟ್...

ಶ್ರೀ ವಾಟಾಳ್ ನಾಗರಾಜ್.—ಅವರು ಹೇಳುತ್ತಾ ಇರುವ ಹೆಸರುಗಳು ನಮ್ಮ ರಾಜ್ಯದಲ್ಲಿ ಯಾವುದೂ ಇಲ್ಲವೇನೂ ಎಂದು ನನಗೆ ಅನ್ನಿಸುತ್ತದೆ. ಐಹೊಳ್ ಅಂತ, ಐಹೊಳೆ ಎಲ್ಲಿದೆಯೋ ನಮಗಂತೂ ಗೊತ್ತಿಲ್ಲ. ನಾನು ತಿಳಿದಿರುವುದು ಐಹೊಳೆ, ಐಹೊಳ್ ಎಲ್ಲಿದೆಯೊ ಗೊತ್ತಿಲ್ಲಿ. ಪಟ್ಟದಕಲ್ ಅಂದರೆ ಯಾವ ಭಾಷೆ ಇವರದು. ಏನು ಇಷ್ಟು ತೀರ.....

ಶ್ರೀ ಬಿ. ಶಿವಣ್ಣ.—ಐಹೊಳೆ, ಪಟ್ಟದಕಲ್ಲು, ಶಿರಾಡಿಘಾಟ್, ಹಿರಿಯೂರು, ಪಿರಿಯಾಪಟ್ಟಣ, ಕೂಡ್ಲಿಗಿ, ಗದಗ್, ಲಿಂಗಸೂಗೂರು, ಶಹಪುರ್, ಹುನಗುಂದ್, ಮಡಿಕೇರಿ, ಮೇಲುಕೋಟೆ, ಸೋಮನಾಥಪುರ, ಶೃಂಗೇರಿ, ಬೆಂಗಳೂರು, ಶ್ರೀರಂಗಪಟ್ಟಣ, ಕಲ್ಕುಟಗಿ.....

ಶ್ರೀ ಎಂ. ವಿ. ವೆಂಕಟಪ್ಪ.—ದಕ್ಷಿಣ ವಲಯದಲ್ಲಿ ಕೋಲಾರದ ಚಿನ್ನದಗಣಿ, ನಂದಿಬೆಟ್ಟ, ಮುಳಬಾಗಿಲನ್ನು ಬಿಟ್ಟಿದ್ದಾರೆ. ಇದಕ್ಕೆ ಕಾರಣವೇನು? ಮುಂದೆ ಏನಾದರೂ ಇವುಗಳನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಬಿ. ಶಿವಣ್ಣ.—ಸೇರಿಸೋಣ.

ಶ್ರೀಮತಿ ದಮಯಂತಿ ಬೋರೇಗೌಡ.—ರಾಜ್ಯದಲ್ಲಿ ಅತ್ಯಂತ ಹೆಚ್ಚಿನ ಪ್ರವಾಸಿಗರು ಬರುವುದು ಶ್ರೀರಂಗಪಟ್ಟಣಕ್ಕೆ ಅದನ್ನು ಏತಕ್ಕೆ ಸೇರಿಸಿಲ್ಲ? ಅಲ್ಲಿ ಪ್ರವಾಸಿಗರಿಗೆ ಏನೇನೂ ಅನುಕೂಲವಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಶಿವಣ್ಣ.—ಅದು ಸೇರಿದೆ.

ಅಧ್ಯಕ್ಷರು.—ಅವರು ಹೈದರಾಬಾದ್ ಪ್ರಾಂತ್ಯದ ಕನ್ನಡ ವಾತಾವರಣದ ಬಗ್ಗೆ ಮಾತನಾಡುತ್ತಿದ್ದಾರೆ. ಶ್ರೀರಂಗಪಟ್ಟಣ ಸೇರಿದೆ.

ಶ್ರೀ ಎಂ. ವಿ. ವೆಂಕಟಪ್ಪ.—ವಿದೇಶಿ ಪ್ರವಾಸಿಗರಿಗೆ ಟ್ಯಾಕ್ಸ್ ಫ್ರೀ ಪೋರ್ಟ್ ಮತ್ತು ಟ್ಯಾಕ್ಸ್ ಫ್ರೀ ಏರ್‌ಪೋರ್ಟ್ ಇರುತ್ತದಲ್ಲ, ಆ ರೀತಿ ಟ್ಯಾಕ್ಸ್ ಫ್ರೀ ಯಾವುದಾದರೂ ಟೂರಿಸ್ಟ್ ಪ್ಲೇಸಸ್ ನೀವು ಮಾಡುವುದಕ್ಕೆ ಅನುಕೂಲ ಆಗುತ್ತದೆಯೇ?

ಅಧ್ಯಕ್ಷರು.—ಯಾವ ಟ್ಯಾಕ್ಸ್ ಫ್ರೀ?

ಶ್ರೀ ಎಂ. ವಿ. ವೆಂಕಟಪ್ಪ.—ಲಿಕ್ಕರ್, ಟ್ಯಾಕ್ಸ್ ಫ್ರೀ ಸಾಮಾನುಗಳನ್ನು ಕೊಂಡು ಕೊಳ್ಳುವುದಕ್ಕೆ ಟ್ಯಾಕ್ಸ್ ಫ್ರೀ ಇರುತ್ತದೆ. ಲೋಕಲ್ ಡ್ಯೂಟಿ ಫ್ರೀ ಇರುತ್ತದೆ.

ಶ್ರೀ ಬಿ. ಶಿವಣ್ಣ.—ಡ್ಯೂಟಿ ಫ್ರೀ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ವಿದೇಶಿ ಪ್ರವಾಸಿಗರಿಗೆ ತಾವು ಯಾವ ರೀತಿ ಮದ್ಯಪಾನಗಳನ್ನು ಕೊಡುತ್ತೀರಿ? ಅದು ಯಾವು ಯಾವುದು,

ಶ್ರೀ ಬಿ. ಶಿವಣ್ಣ.—ಪ್ರೊಹಿಬಿಷನ್ ಇಲ್ಲ ಅಂದ ಮೇಲೆ ಕೊಡಂವ ಪ್ರಶ್ನೆ ಬರುವುದಿಲ್ಲ.

ಶ್ರೀ ಹೆಚ್. ಎಂ. ರೇವಣ್ಣ.—ಬೆಂಗಳೂರು ಜಿಲ್ಲೆಯ ವಾಗಡಿ ತಾಲ್ಲೂಕಿನಲ್ಲಿರುವ ಸಾವನದುರ್ಗ ಒಂದು ಪ್ರೇಕ್ಷಣೀಯ ಸ್ಥಳವಾಗಿದೆ. ಈ ಸಾರಿ ಅದಂ ಸೇರಿಲ್ಲ. ಅದನ್ನು ಸೇರಿಸುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ಶಿವಣ್ಣ.—ಅದನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಹೆಚ್. ಎಸ್. ಕೌಜಲಗಿ.—ಉತ್ತರ ಕರ್ನಾಟಕದಲ್ಲಿ ಶ್ರೀಕ್ಷೇತ್ರ ಸೊಗಲೂರು ಸಹ ಒಂದು ಪ್ರವಾಸಿಗರ ಕೇಂದ್ರವಿದೆ. ಅದನ್ನು ಸಹ ಈ ಯೋಜನೆಯಲ್ಲಿ ಸೇರಿಸಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತಾ ಇದ್ದೇನೆ.

ಪುತ್ತೂರು ತಾಲ್ಲೂಕಿನ ಕೋರ್ಟು ಕಟ್ಟಡದ ಬಗ್ಗೆ

೧೫೩. ಶ್ರೀ ವಿನಯ ಕುಮಾರ್ ಸೊರಕೆ (ಪುತ್ತೂರು).—ಪ್ರವಾಸ್ಯ ಯೋಜನಾ, ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಪುತ್ತೂರು ತಾಲ್ಲೂಕಿನ ಪುರಾತನ ಕೋರ್ಟು ಕಟ್ಟಡ ಬಿದ್ದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?